ಎಂ. ಸಿದ್ಧಾರ್ಥ ಹೆಬ್ಬಾರ, ಈದು

*ಪ್ರಕೃತಿ, ಸಂಸ್ಕೃತಿಯನ್ನು ಬೆಸೆಯುವುದು ಯಾವುದು?*



ಕೃತಿ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಶೃಂಗಾರ ಕೃತಕ; ಬಂಗಾರ?*

ಕೌತುಕ!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ

*ತಮ್ಮ ಮೊಬೈಲ್ ರಕ್ಷಣೆಗೆ ಸ್ಕ್ರೀನ್ ಗಾರ್ಡ್ ಹಾಕುವವರು ಬೈಕ್ ರೈಡ್ ಮಾಡುವಾಗ ತಲೆ ರಕ್ಷಣೆಗೆ ಹೆಲ್ಮೆಟ್ ಏಕೆ ಧರಿಸುವುದಿಲ್ಲ?*

**hell-mate** ಆಗುವ ಬಯಕೆಯಂತೆ!

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

*ಯಶಸ್ಸಿಗೆ ಹಲವು ಅಪ್ಪಂದಿರು; ಸೋಲಿಗೆ?*

ಹಲವಾರು ಮನ್ನಾಗಳು, ಹಲವಾರು ಮೀಸಲಾತಿಗಳು.

ಕೃಷ್ಣಮೂರ್ತಿ ಮನ್ನಾರ್, ಶಿವಮೊಗ್ಗ

*ಈರುಳ್ಳಿ ಹಚ್ಚುವಾಗ ಬರುವ ಕಣ್ಣೀರಿಗೂ, ದುಃಖ/ಸಂತೋಷ ಆದಾಗ ಬರುವ ಕಣ್ಣೀರಿಗೂ ಏನು ವ್ಯತ್ಯಾಸ?*

ಈರುಳ್ಳಿಯ ಕಣ್ಣೀರಿಗೆ ಬಿಕ್ಕಳಿಕೆ, ಡೈಲಾಗ್‌ಗಳ ಬ್ಯಾಕ್‌ಗ್ರೌಂಡ್ ಇರುವುದಿಲ್ಲ.

ರಮೇಶ. ಜ. ಬೊಂಗಾಳೆ, ಬೈಲಹೊಂಗಲ

*ಕನಸಿಗೂ, ನನಸಿಗೂ ಮಧ್ಯೆ ಏನು ಸಾರ್?*




ಅಲಾರಂ ಸದ್ದು!

ಟಿ.ಎಂ. ಮಾನಪ್ಪ, ಶಿವಮೊಗ್ಗ

*ನಗೆಯ ಅಲೆಗೂ, ಸಮುದ್ರದ ಅಲೆಗೂ ವ್ಯತ್ಯಾಸವೇನು?*

ಸಮುದ್ರದ ಅಲೆ ಹುಣ್ಣಿಮೆಯಂದು ಹೆಚ್ಚಾದರೆ ಜನ ತಪ್ಪು ತಿಳಿಯುವುದಿಲ್ಲ.

ಆರಿಫ್, ದಾವಣಗೆರೆ

*ಪ್ರೀತಿಗೆ ತಳಹದಿ ಯಾವುದು?*

ಸಾಮೀಪ್ಯ

ಎಚ್.ಆರ್. ದೇಸಾಯಿ, ರಾಯಚೂರು

*ಮೇಲೆ ಹೋಗುವಾಗ ಸ್ವರ್ಗದ ಮತ್ತು ನರಕದ ಹಾದಿಗಳು ಎಲ್ಲಿ ಕವಲೊಡೆಯುತ್ತವೆ?*

ಅಮೃತಸರದ ಗಡಿಯ ಊರ್ಧ್ವದಲ್ಲಿ– ಅತ್ತ ನರಕ, ಇತ್ತ ಸ್ವರ್ಗ!

ಮಲ್ಲನಗೌಡ. ಗಂ. ಪಾಟೀಲ, ರಾಮದುರ್ಗ

*ನಮ್ಮ ದೇಶದಲ್ಲಿ ಅತ್ಯಾಚಾರ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿವೆಯಲ್ಲ, ಏಕೆ?*

**illegal** ಆದುದಕ್ಕೆ ಶಿಕ್ಷೆ ಇಲ್ಲೀ ಈಗಲೇ ಅಲ್ಲದ್ದರಿಂದ.

ದೇಶವಳ್ಳಿ ಶಿವು, ಸಂತೇಮರಹಳ್ಳಿ

*ಸಂತೋಷದಲ್ಲಿ ನಗದವರನ್ನು, ದುಃಖದಲ್ಲಿ ಅಳದವರನ್ನು ಏನೆನ್ನಬಹುದು?*

ಕೋಮಾದಲ್ಲಿರುವವರು.

ರವಿ. ಎಂ. ಪೈ, ಹೊನ್ನಾವರ

*ವಿಶ್ವಮಾನವನಾಗಿ ಹುಟ್ಟುವ ಮಾನವ ಬೆಳೆಯುತ್ತಾ ಅಲ್ಪಮಾನವ ಆಗುವುದೇಕೆ?*

ಜಾತಿಬದ್ಧನಾಗಿ, ನೀತಿಭ್ರಷ್ಟನಾಗುವುದರಿಂದ.

ಕುಬೇರಪ್ಪ. ಎಂ. ವಿಭೂತಿ, ಹರಿಹರ

*ಆಫೀಸಿನಲ್ಲಿ ಕುದುರೆಯಂತೆ ಇರುವ ನಮ್ಮ ಬಾಸ್ ಮನೆಯಲ್ಲಿ ಕತ್ತೆಯಂತೆ ಆಗುವರಲ್ಲಾ...?*

ಸರಿಯೇ! ಕುದುರಬಹುದಾದಲ್ಲಿ ಕುದುರೆ; ಕತ್ತೆತ್ತಲಾಗದಲ್ಲಿ ಕತ್ತೆ!

ಪಿ.ಜೆ.ರಾಘವೇಂದ್ರ, ಮೈಸೂರು

*ನ್ಯಾಯದೇವತೆಯ ತಕ್ಕಡಿ ಒಂದು ಕಡೆಗೆ ವಾಲಿಕೊಂಡಿರುವುದೇಕೆ?*

ಜಯಲಲಿತೆಗೆ ಕೊಟ್ಟ ತೀರ್ಪಿನ ಭಾರಕ್ಕೆ!

ಆರ್. ಮಧುಸೂದನ್, ಹಾಸನ

*ಬಹುತೇಕ ಮೆಡಿಕಲ್-ಎಂಜಿನಿಯರಿಂಗ್ ಕಾಲೇಜುಗಳನ್ನು ಸ್ವಾಮೀಜಿಗಳೇ ನಡೆಸಲು ಕಾರಣವೇನು?*

ಡೊನೇಷನ್ ಆಶ್ರಮದ ಲೆಕ್ಕದಲ್ಲಿ, ಫೀಸ್ ಕಾಲೇಜ್ ಲೆಕ್ಕದಲ್ಲಿ ಪಡೆಯಬಹುದಲ್ಲ!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಚಾರಿತ್ರ್ಯ ಎಂದರೇನು?*

ಹರಕಲು ಬನೀನನ್ನು ಮುಚ್ಚುವ ಸುಂದರ ಅಂಗಿ.

## ಬಹುಮಾನಿತ ಪ್ರಶ್ನೆ

ವೈ.ಎನ್. ಸುಂದರೇಶನ್, ಮೈಸೂರು

*ಹಣ ಜಾರಿ ಬಿದ್ದರೆ ಎತ್ತಿಕೊಳ್ಳುತ್ತಾರೆ. ಹೆಣ್ಣು ಜಾರಿ ಬಿದ್ದರೆ?*

ಮುತ್ತಿಕೊಳ್ಳುತ್ತಾರೆ.

ಎಚ್.ಜಿ. ಜಗದೀಶ್, ಮೈಸೂರು

*ಹುಣಿಸೆಮರ ಮುಪ್ಪಾದರೆ ಹುಳಿ ಮುಪ್ಪೇ ಎಂದು ವಯಸ್ಸಾದವರಿಗೆ ಹುಣಿಸೆಮರದ ಹೋಲಿಕೆ ನೀಡುವರಲ್ಲಾ, ಏಕೆ?*

ಹುಣಿಸೆಯಷ್ಟೇ ಕಿವುಚಿದ ಮುಖ, ಮನದಲ್ಲಿ ಹುಳಿ ಇರುತ್ತವಲ್ಲ!

ಡೈರಿ ವಿಶ್ವನಾಥ್, ಬೆಂಗಳೂರು

*ಅಮೂಲ್ಯ ಯಾವುದು?*

ಯಾವುದನ್ನು ಎಂದಿಗೂ ಮೂಲೆಗೆ ಹಾಕಲಾಗದೋ ಅದು!

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು

*ಸ್ವಚ್ಛ ಭಾರತ ಅಭಿಯಾನದಂತೆ ಸ್ವಚ್ಛ ಪ್ರೀತಿ ಅಭಿಯಾನ ಇದ್ದರೆ ಹೇಗಿರುತ್ತದೆ?*



ಎಚ್ಚರ! ಅಲ್ಲಿಯಂತೆಯೇ ಇಲ್ಲೂ ಫೋಟೋಗೆ ಪೋಸ್ ನೀಡಿ ಮಾಯವಾದಾರು!

ಎಂ. ಹಮೀದ್, ವಿಟ್ಲ

*ಈಗಿನ ಹುಡುಗಿಯರು ಸೀರೆಗಿಂತ ಲಾಂಗ್ ಟಾಪ್ ಅನ್ನೇ ಹೆಚ್ಚು ಇಷ್ಟ ಪಡುತ್ತಾರೇಕೆ?*

ಒಂದು ಸೀರೆ ಇಸ್ತ್ರಿ ಮಾಡಿಸುವ ಖರ್ಚಿನಲ್ಲಿ ಮೂರು ಟಾಪ್ ಇಸ್ತ್ರಿ ಮಾಡಿಸಬಹುದಲ್ಲ!

ರತ್ನಾ ಅಶೋಕ ಗೊರವರ, ನವಲಗುಂದ

*ಮೂರೂ ಬಿಟ್ಟವರು ಲೋಕಕ್ಕೇ ದೊಡ್ಡವರು. ಮೂರೂ ಇರುವವರು?*

'ಬದುಕೋ ದಾರಿ ಗೊತ್ತಿಲ್ಲದ ಮೂದೇವಿ' ಎಂದು ಪ್ರತಿದಿನ ಬೈಸಿಕೊಳ್ಳುವವರು.

■ ರಾಮ್